(3) ಯಾವ ಸಾಲ್ ಮತ್ತು ಮಾಹೆಗಾಗಿ ಗುತ್ತಿಗೆ ಮೊಬಲಗು ವಸೂಲ್ಮಾಡಲ್ಪಟ್ಟಿರುತ್ತೋ ಅವುಗಳನ್ನ ಚಲನ್ನಲ್ಲಿ ಎಂದಿಗೂ ಕಾಣಿಸದೆ ಇರಕೂಡದು.

(4) ಖಜಾನೆಗೆ ಹಣ ಪಾವತಿಯಾದ ತಾರೀಖು ಕಾಣಿಸಲ್ಪಡಲು ಚಲ್ನ ಕೆಳಭಾಗದಲ್ಲಿ ಬಿಟ್ಟಿರುವ ಜಾಗಾದಲ್ಲಿ ಟ್ರೈಜರಿ ಇಲಾ ಖೆಯವರೇ ತಾರೀಖನ್ನ ಕಾಣಿಸಬೇಕೇಹೊರ್ತು ಇಜಾರದಾರು ಅದನ್ನ ಬರಿಯಕೂಡದು.

(5) ಚಲ್ನಗಳಲ್ಲಿ ಮೊಬಲಗು ವಗೈರೆ ಯಾವದನ್ನಾದರೂ ತಿದ್ದಿದಲ್ಲಿ ಅದಕ್ಕೆ ಟ್ರೈಜರಿ ಆಫಿಸರವರ ರುಜು ಅಗತ್ಯವಾಗಿ ಆಗಿ ರಬೇಕು.

(6) ಚಲ್ನನಲ್ಲಿ ಕಾಣಿಸಲ್ಪಡುವ ಮೊಬಲಗು ಅಕ್ಷರ ಮತ್ತು ಸಂಖೆಯಲ್ಲಿ ಸಹ ಬಂದಕ್ಕೊಂದು ಭೇದವಿಲ್ಲದಂತೆ ಸರಿಯಾಗಿ ಇರುತ್ತೆಂಬುವದನ್ನ ಜಾಗರೂಕತೆಯಿಂದ ನೋಡಿಕೊಳ್ಳಬೇಕು.

2. ಈ ಮೇಲ್ಕಂಡ ವಿಧಾಯಕರಂತೆಯಾಗಲಿ ಮತ್ತು ಇವಕ್ಕೆ ಹಿಂದೆ ಇದೇ ವಿಚಾರದಲ್ಲಿ ಕೊಡಲ್ಪಟ್ಟ ಸರ್ಕ್ಯೂಲರ್‌ನಂತೆ ಯಾಗಲಿ ತಯಾರ್ಮಾಡಲ್ಪಡದೇ ಇರುವ ವಿಶಿಷ್ಟ ಚಲ್ನಗಳೂ ವಾಪಸು ಮಾಡಲ್ಪಡುತ್ತದೆ.

ಈ. ಆರ್. ಸುಬ್ಬಾಯರ್,
ಕಾಂಪ್ಟ್ರೋಲರ್.

ತುಮಕೂರು ಡಿಸ್ಟ್ರಿಕ್ಟ್.
ಇಸ್ತಿಹಾರಿನಾಮೆ.

ಇದರಿಂದ ಸಕಲಜನಗಳಿಗೂ ತಿಳಿಯಪಡಿಸುವದೇನಂದರೆ, ತುಮಕೂರು ಡಿಸ್ಟ್ರಿಕ್ಟಿನಲ್ಲಿ ಇರೇಬಿನಲ್ಲಿ ನಮೂದಾಗುವ ಸ್ಟೇಷನರೆ ನ್ಸುಗಳು ವಿನಹ ತುಮಕೂರು, ಮದ್ದಗಿರಿ, ಚಿಕ್ಕನಾಯಿಕನಹಳ್ಳಿ, ಕಿರಾ, ಗುಬ್ಬಿ,

1. ಪೇವರಾಯದುರ್ಗ
2. ಮದ್ದಗಿರಿ
3. ಕೋಳಿಕಲ್
4. ಬುಕ್ಕಾಪಟ್ಟಣ
5. ಮಂಜಲದೊರೆ
6. ಹುಲಿಯೂರದುರ್ಗ
7. ಕಂಪಲಾಪುರ
8. ಕುದುರೆಕಣಿವೆ
9. ತೀರ್ಥರಾಂಪುರ

ತಿಪಟೂರ್, ಪಾವಗಡ, ಕುಣಿಗಲ್ ಈ ತಾಲ್ಲೂಕುಗಳ ಮತ್ತು ಕೊರಟಗೆರೆ, ಹುಳಿಯಾ ರ್, ತುರುವೆಕೆರೆ ಸಬ್ ತಾಲ್ಲೂಕುಗಳಲ್ಲಿರುವ ಡಿಸ್ಟ್ರಿಕ್ಟು ಫಾರೆಸ್ಟುಗಳ ಬಾಬತು ಅರ ಗಿನ ಕಂಟ್ರಾಕ್ಟು ಫಾರೆಸ್ಟುಗಳ ಬಾಬತು ಅರಗಿನ ಕಂಟ್ರಾಕ್ಟು 1896ನೇ ಇಸವಿ ಜುಲೈ ಗುರ್ತೇ ಲಾಗಾಯತು 1897ನೇ ಜೂನ್ ಆಖೈರವರಿಗೆ ಒಂದು ವರುಷ ಅಂದರೆ 1896—97ನೇ ಸಾಲಿಗೆ ಜಡದರಖಾಸ್ತುದಾರ್ರಿಗೆ 1896ನೇ ಇಸವಿ ಜೂನ್ ತಾರೀಖು 1ರಲ್ಲು ಮಧ್ಯಾನ್ನ 12 ಘಂಟೆಗೆ ತುಮಕೂರು ಡಿಸ್ಟ್ರಿಕ್ಟು ಆಫಿಸಿನಲ್ಲಿ ಡೆಪ್ಯುಟಿ ಕಮ್ಮಿಷನರ್ ಅಥವಾ ಅವರಿಂದ ನೇಮಿಸಲ್ಪಡುವ ಅಸಿಸ್ಟೆಂಟ್ ಕಮ್ಮಿಷನರ್ ರೂಬರೂ ವಿಕ್ರಯಿಸಲ್ಪಡುವದು.

II. ಜಡ ದರಖಾಸ್ತುದಾರರು ತಮ್ಮ ದರಖಾಸ್ತು ಮಂಜೂರಾದ ನಂತರ ಮಂಜೂರಾದ ಕಂಟ್ರಾಕ್ಟು ವಟ್ಟು ಮೊಲಗಿನ ನಾಲ್ಕು ತಿಂಗಳ ಖಿಸ್ತುಗಳಿಗೆ ಸವನಾದ ಮೊಬಲಗು ನಗದಾಗಲಿ ಅಥವಾ ಕರ್ನಿಕಿ ನೋಟುಗಳಲಿ ಹಾಜರ್ಮಾಡತಕ್ಕದ್ದು, ಹಾಗೆ ಮಾಡಲಿಕ್ಕೆ ತಪ್ಪಿದ ಪಕ್ಷ ಸದರೀ ಕಂಟ್ರಾಕ್ಟು ಕೂಡ್ಲೆ ಪುನಹ ಹರಾಜು ಹಾಕಲ್ಪಟ್ಟು ಆ ಮೂಲಕ ಸರ್ಕಾರಕ್ಕೆ ಮುಂಟಾಗುವ ನುಕ್ಸಾನಿಗೆ ಅವರನ್ನು ಗುರಿಮಾಡಲಾಗುವದೀತು.

III. ಮಂಜೂರಾದ ದರಖಾಸ್ತುದಾರರು 1896ನೇ ಜುಲೈ 1ನೇ ತಾರೀಖಿನಲ್ಲಿ ಕಂಟ್ರಾಕ್ಟು ಕೆಲಸದ ಮೇಲೆ ಪ್ರವೇಶಿಸಿ ತಮ್ಮ ಮೊದಲನೆ ಮಾಹೆ ಖಿಸ್ತನ್ನು 1896ನೇ ಇಸವಿ ಆಗಸ್ಟು 15ರಲ್ಲಿ ಆಗಲಿ ತತ್ಪೂರ್ವ ಆಗಲಿ ಪಾವತಿ ಮಾಡತಕ್ಕದ್ದು. ಆ ತರುವಾಯ ಪ್ರತಿ ಮಾಹೆ ಖಿಸ್ತು ಆ ತಿಂಗಳು ಕಳೆದ ಮಾರನೆತಿಂಗಳ 15ನೇ ತಾರೀಖಿನಲ್ಲಿ ಆಗಲಿ ತತ್ಪೂರ್ವ ಆಗಲಿ ಪಾವತಿ ಮಾಡತಕ್ಕದ್ದು ಅಂಥಾ ಮಾಹೆವಾರಿ ಖಿಸ್ತುಗಳು ಡಿಪಾಜಿಟ್ಟು ಇಟ್ಟ ಮೊಬಲಗ್ಯೆ ಸಂಬಂಧವಿಲ್ಲದೆ ಪ್ರತ್ಯೇಕವಾಗಿ ಪಾವತಿ ಮಾಡತಕ್ಕದ್ದು. ಹಾಗೆ ಪ್ರತಿಮಾಹೆ 15ನೇ ತಾರೀಖಿನ ಒಳಗೇನೇ ಖಿಸ್ತು ಮೊಬಲಗು ಪಾವತಿಮಾಡದೆ ತಪ್ಪಿದಲ್ಲಿ ಆ ಲಾಗಾಯಿತು ಅಂಥಾ ಖಿಸ್ತು ಮೊಬಲಗ್ಯೆ ಸಾಲಿಯಾನಾ ಶೇಕಡಾ 6 ರೂಪಾಯಿನಂತೆ ಬಡ್ಡಿ ದಾಖಲ್ಮಾಡ್ಪಡುವದು.

IV. ಕಂಟ್ರಾಕ್ಟುದಾರ್ರು ಕೊಡತಕ್ಕ ಮಾಹೆವಾರಿ ಖಿಸ್ತುಗಳ ಮೇಲೆ ರೂಪಾಯಿ ವಂದಕ್ಕೆ ವಂದಾಣೆ ಮೇರೆಗೆ ಲೋಕಲ್ ಸೆಸ್ಸನ್ನು ಕೊಡಬೇಕು.

V. ಅವಿಚ್ಛಿನ್ನವಾಗಿ (2) ಯರಡು ತಿಂಗಳವರಿಗೂ ಸದರೀ ಖಿಸ್ತು ಕೊಡಲಿಕ್ಕೆ ತಪ್ಪಿದರೂ ಅಥವಾ ಸಾವಕಾಶ ಮಾಡಿದರೂ ಸದರೀ ಕಂಟ್ರಾಕ್ಟು ಪ್ರಕಾರವಾಗಿ ರದ್ದಾಗಲಿಕ್ಕೆ ಗುರಿಯಾಗಿ ಡಿಪಾಜಿಟ್ಟು ವಟ್ಟು ಮೊಬಲಗನ್ನ ಗಣನಿಗೆ ತಾರದೆ ಷರತ್ತಿಗೆ ತಪ್ಪಿದ ಕಂಟ್ರಾಕ್ಟುದಾರನ್ನ ಲುಕ್ಸಾನಿಗೆ ಗುರಿಪಡಿಸಿ ಕಂಟ್ರಾಕ್ಟು ಪುನಹ ವಿಕ್ರಯಿಸಲ್ಪಡುವದು. ಸದರೀ ಡಿಪಾಜಿಟ್ಟಿ ಮೊಬಲಗು ಗವರ್ನಮೆಂಟಿಗೆ ಕೇರಿಸಿಕೊಳ್ಳಲ್ಪಡುವದು ಮತ್ತು ಬಾಕಿ ಮೊಬಲಗು ವಿಷಯದಲ್ಲಿ ರೆವಿನ್ಯೂ ಕಂದಾಯದ ಮೊಬಲಗಿನಂತೆ ವಸೂಲ್ಮಾಡಲ್ಪಡುವದು.

VI. ಕಂಟ್ರಾಕ್ಟುದಾರ್ರು ಯಾವ ಗಿಡಗಳಿಂದ ಅರಗು ತೆಗದುಕೊಂಡು ಹೋಗುತ್ತಾರೋ ಅಂತಾ ಅರಗಿನ ಗಿಡಗಳನ್ನು ಕತ್ತರಿಸುವದಕ್ಕೂ ಸುಡಿಸುವದಕ್ಕೂ ಯಾ ಅರೂಪ ಪಡಿಸುವದಕ್ಕೂ ಅಧಿಕಾರವನ್ನು ಹೊಂದಿರುವದಿಲ್ಲ.

VII. ಇನಾಂದಾರ್ರುಗಳಿಗೆ ಸ್ಥಿರಪಟ್ಟಿರುವ ಹಕ್ಕಿನ ವಿಷಯದಲ್ಲಿ ಕಂಟ್ರಾಕ್ಟುದಾರ್ರು ಪ್ರವೇಶಿಸಕೂಡದು.

VIII. ಹರಾಜು ಕಾಲದಲ್ಲಿ ಜಾಲಾದೀ ಗಿಡಗಳು ಇರತಕ್ಕ ಬಗೆರ ಹಿಡುವಳಿ ಜಮೀನುಗಳು ಕಂಟ್ರಾಕ್ಟು ಜಾರೀಲಿರುವ ಕಾಲದಲ್ಲಿ ಸಾಗುವಳಿಗೆ ತೆಗದುಕೊಂಡ ಪಕ್ಷ ಕಂಟ್ರಾಕ್ಟುದಾರ ತನ್ನ ಕಂಟ್ರಾಕ್ಟು ಆಖೈರಾಗುವ ವರಿಗೂ ಅಂತಾ ಗಿಡಗಳಲ್ಲಿ ಅರಗು ಜಮಾ ಯಿಸಿಕೊಳ್ಳತಕ್ಕ ಹಕ್ಕು ಉಳ್ಳವನಾಗಿ ಇರತಕ್ಕದ್ದು.

IX. ಕಾರಣಗಳನ್ನು ತೋರಿಸದೇನೇ ಯಾವ ಸವಾಲನ್ನಾದರೂ ಅಂಗೀಕರಿಸುವದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಡೆಪ್ಯುಟಿ ಕಮ್ಮಿಷನರವರು ಸ್ವತಂತ್ರರಾಗಿರುತ್ತಾರೆ.

ಎಂ. ನಾರಾಯಣರಾವ್, ಆಫಿಸಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ್.

ಮೈಸೂರ ಡಿಸ್ಟ್ರಿಕ್ಟು ಫಾರೆಸ್ಟ್ ಡಿಪಾರ್ಟ್‌ಮೆಂಟ್.
ನೋಟಿಫಿಕೇಷನ್.

ತಾರೀಖು 18–21ನೇ ಏಪ್ರೆಲ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ವಿವರಿಸಿರುವ ನಾಟಾ ಜಂತೆ ಸರ ಮತ್ತು ಮುಂಡಿಗೆಗಳು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಂದ 1896ನೇ ಇಸವಿ ಮೇ ತಾರೀಖು 16ರಲ್ಲಿ ನಂಜನಗೂಡು ಡಿಪೋದಲ್ಲೂ ಮತ್ತು ಆದೆ ಮೇ ತಿಂಗಳ ತಾರೀಖು 18ರಲ್ಲಿ ಮೈಸೂರ್ ಉಡ್‌ಯಾರ್ಡಿನಲ್ಲೂ ಹರಾಜ್ ಮಾಡಿಸಲ್ಪಡುತ್ತವೆ.